ಪಡೆಯುತ್ತವೆ. ಹಾಗಾಗಿ ಕನಸುಗಳಿಗೆ ಅಂಥ ಘನತರವಾದ ಅಸ್ತಿತ್ವವೇನೂ ಇರುವುದಿಲ್ಲ. ಇಡೀ ಮನುಷ್ಯನ ದೇಹ ಬಹುತೇಕವಾಗಿ ಅವನ ಮೆದುಳಿನಿಂದ ನಿಯಂತ್ರಣಕ್ಕೊಳಪಟ್ಟಿರುತ್ತದೆ. ಮೆಡುಲ್ಲಾ ಅಬ್ಲಾಂಗೇಟಾ ಎನ್ನುವುದು ಮೆದುಳಿನ ಮುಖ್ಯವಾದ ಭಾಗ. ಇದು ಮೆದುಳಿನ ಕೆಳಭಾಗದಲ್ಲಿದ್ದು ನರಮಂಡಲವನ್ನು ನಿಯಂತ್ರಿಸುತ್ತದಲ್ಲದೆ, ಹೃದಯ ಚಲನೆ, ಉಸಿರಾಟ, ನಿದ್ರೆ ಮತ್ತು ಬಿಪಿಯನ್ನು ನಿಯಂತ್ರಿಸುತ್ತಿರುತ್ತದೆ. ಇದು ನರಮಂಡಲದ ಕೇಂದ್ರ ಭಾಗವಾಗಿದೆ. ಮಾನವನ ಮೆದುಳಿನಲ್ಲಿ ಸರಿಸುಮಾರು ಎಂಬತ್ತಾರು ಶತಕೋಟಿ ನ್ಯೂರಾನ್‌ಗಳಿವೆಯಂತೆ. ಮೆದುಳಿನಲ್ಲಿರುವ ನರನಾರಿನ ಉದ್ದ ಸರಿಸುಮಾರು ಐದು ಲಕ್ಷ ಕಿಲೋಮೀಟರ್‌ಗಳಂತೆ. ಅಂದರೆ ಭೂಮಿ ಮತ್ತು ಚಂದ್ರನ ನಡುವಿನ ಅಂತರಕ್ಕಿಂತಲೂ ಹೆಚ್ಚು. ಈ ವಿಷಯಗಳನ್ನು ಊಹಿಸಿಕೊಳ್ಳಲಿಕ್ಕಾದರೂ ಸಾಮಾನ್ಯ ಜನರಿಗೆ ಆಗುತ್ತದ? ಸಾಮಾನ್ಯ ಜನ ಏನು ವಿದ್ಯಾವಂತರೂ ಕೂಡಾ ನಂಬಲು ಸಾಧ್ಯವಾಗದ ಸಂಗತಿಗಳಿವು.

ನಾವು ಜೀವಿಸುತ್ತಿರುವ ಭೂಮಿಯನ್ನೇ ತೆಗೆದುಕೊಳ್ಳಿ; ಈ ಭೂಮಿ ಗಂಟೆಗೆ ಸಾವಿರದ ಆರು ನೂರು ಕಿಲೋಮೀಟರ್ ವೇಗದಲ್ಲಿ ತನ್ನ ಕಕ್ಷೆಯಲ್ಲಿ ತಿರುಗುತ್ತಿದೆಯಂತೆ. ನಾವು ಕಾರಿನಲ್ಲಿ ಗಂಟೆಗೆ ನೂರು ಕಿಲೋಮೀಟರ್ ವೇಗದಲ್ಲಿ ಚಲಿಸುತ್ತಿದ್ದರೇನೇ ಭಯವಾಗುತ್ತದೆ. ಆದರೆ ಭೂಮಿ ನಮಗೆ ಎಷ್ಟು ಪ್ರಶಾಂತವಾಗಿ ಕಾಣುತ್ತದೆ ನೋಡಿ. ಈ ಎಲ್ಲಾ ಸಂಗತಿಗಳನ್ನು ವೈದ್ಯಕೀಯ ಮತ್ತು ವೈಜ್ಞಾನಿಕ ಸಂಶೋಧನೆಗಳು ನಿಜವೆಂದು ಸಾಬೀತುಪಡಿಸಿವೆ! ಮನುಷ್ಯನ ದೇಹವೇ ಒಂದು ಅತ್ಯಾಧುನಿಕ ಯಂತ್ರ. ಏಕೆಂದರೆ ಮಾನವನ ದೇಹದಲ್ಲಿ ಇಂಥ ಅದ್ಭುತವಾದ ಅನನ್ಯವಾದ, ಅತ್ಯಮೂಲ್ಯವಾದ ಮೆದುಳು ಇದೆ. ಮುಂದೆ ಎಂಥ ವೈಜ್ಞಾನಿಕ ಸಂಶೋಧನೆಗಳಾದರೂ ಮನುಷ್ಯ ತನ್ನಂತಹ ಒಂದು ಜೀವಂತ ಯಂತ್ರವನ್ನು ಯಾವ ಲೋಹದಿಂದಲೂ ತಯಾರಿಸಲು ಸಾಧ್ಯವಾಗುವುದಿಲ್ಲ. ಅಂತಿಮವಾಗಿ ಹೇಳುತ್ತೇನೆ; ಕನಸುಗಳು ಕೆಡುಕನ್ನೂ ಉಂಟು ಮಾಡುವುದಿಲ್ಲ, ಒಳಿತನ್ನೂ ಉಂಟು ಮಾಡುವುದಿಲ್ಲ. ಹಾಗಾಗಿ ನೀನು ಯಾವ ಚಿಂತೆಯೂ ಇಲ್ಲದೆ ನಿನ್ನ ವ್ಯಾಸಂಗದಲ್ಲಿ ಮುಂದುವರಿಯಬಹುದು. ಓದು, ಸಂಗೀತ, ಆಟ, ಸಿನಿಮಾ ಮುಂತಾದುವುಗಳ ಕಡೆ ನಿಯಮಿತವಾಗಿ ಗಮನಹರಿಸು ಮತ್ತು ಯಾವುದನ್ನೂ ಅತಿಯಾಗಿ ಹಚ್ಚಿಕೊಳ್ಳಬಾರದಷ್ಟೆ. ನಿನಗೆ ಏನಾದರೂ ಕನ್ಫ್ಯೂಷನ್ ಉಂಟಾದಾಗ ಖಂಡಿತವಾಗಿಯೂ ನನ್ನನ್ನು ಬಂದು ಕಾಣಬಹುದು. ಆದರೆ ಎರಡು ದಿನ ಮೊದಲೇ ಭೇಟಿ ಸಮಯವನ್ನು ನಿಗದಿಪಡಿಸಿಕೊಳ್ಳಬೇಕು. ನನಗೆ ಶ್ರೀಮಂತರಿಗಿಂತ ಬದುಕಿಗಾಗಿ ಪ್ರತಿಕ್ಷಣವೂ ಬಡಿದಾಡುವ ಜನರ ಬಗ್ಗೆಯೇ ಹೆಚ್ಚು ಕಾಳಜಿ' ಎಂದು ಡಾಕ್ಟರ್ ಮನೋರಂಜನಿ ತಮ್ಮ ಸುದೀರ್ಘವಾದ ಮಾತುಗಳನ್ನು ನಿಲ್ಲಿಸಿ ತಾತ, ಮೊಮ್ಮಗನನ್ನು ಬೀಳ್ಕೊಟ್ಟಿದ್ದರು.

## ಕಳೆದ ಸಂಚಿಕೆಯಲ್ಲಿ



ವಜ್ರಗಳ ಗುಲಾಬಿ ಹಿಡಿದು ಸೋನಾಲಾಲ್ ತನ್ನ ಸ್ವಪ್ನಸುಂದರಿಯ ಮುಂದೆ ನಿಂತ, ಕಾಮನಬಿಲ್ಲಿನಂಥ ಅವಳು ಕೃತಕ ಗುಲಾಬಿಯನ್ನು ತಿರಸ್ಕರಿಸಿ, ಅದನ್ನು ಬಿಸುಟಳು. ಹೂವು ಉರಿಯಾಗಿ ಬೆಂಕಿಯಾಗಿ ಸುಡತೊಡಗಿತು. ಇದೇ ಸ್ವಪ್ನ ಏಕಕಾಲಕ್ಕೆ ತಾತ–ಮೊಮ್ಮಗ ಇಬ್ಬರಿಗೂ ಬಿದ್ದು ಅಚ್ಚರಿಗೊಂಡರು. ಕಾಡತೊಡಗಿದ ಕನಸುಗಳಿಂದ ಹೊರಬರಲು ಇಬ್ಬರೂ ದಾರಿ ಹುಡುಕತೊಡಗಿದರು. ಆ ಪ್ರಯತ್ನದಲ್ಲಿ ಅವರು ಎಡತಾಕಿದ್ದು ಡಾ. ಮನೋರಂಜನಿ ಎನ್ನುವ ಪ್ರಸಿದ್ಧ ಸೈಕೋಥೆರಪಿಸ್ಟ್‌ರನ್ನು. ಬಾಲಿವುಡ್ ತಾರೆಯರಿಗೆ ಕೌನ್ಸೆಲಿಂಗ್ ನಡೆಸುತ್ತಿದ್ದ ಮನೋರಂಜನಿ ಅವರೆದುರು ಗುನ್ನಾಲಾಲ್ ಹೋಗಿ ಕೂತರು. ಮಾತುಕತೆಯ ನಡುವೆ ಅವರ ಭೂತಕಾಲದ ನೆನಪುಗಳ ಸುರುಳಿ ಬಿಚ್ಚಿಕೊಳ್ಳತೊಡಗಿತು. ಮನೋರಂಜನಿ ಅವರ ಕಸುಬುದಾರಿಕೆ ಬಗ್ಗೆ ಗುನ್ನಾಲಾಲ್ ಅಚ್ಚರಿಗೊಂಡರು. ಮರುದಿನ, ತಾತ–ಮೊಮ್ಮಗ ಇಬ್ಬರೂ ವೈದ್ಯರ ಸಮ್ಮುಖದಲ್ಲಿದ್ದರು. ಬಾಲ್ಯದಲ್ಲೇ ಮಿಡ್ ಬ್ರೈನ್ ಆ್ಯಕ್ಟಿವೇಷನ್ ಮಾಡಿಸಿಕೊಂಡ ಆಸ್ಕರ್ ವೈಲ್ಡ್ ಬಗ್ಗೆ ಮನೋರಂಜನಿ ಮೆಚ್ಚುಗೆ ವ್ಯಕ್ತಪಡಿಸಿದರು. ಸೋಷಿಯಲ್ ಫ್ಯಾಬ್ರಿಕೇಷನ್ ಬಗ್ಗೆ ವೈದ್ಯರು ಹೇಳತೊಡಗಿದ ವಿವರಗಳನ್ನು ಅರಗಿಸಿಕೊಳ್ಳುವುದು ತಾತ–ಮೊಮ್ಮಗ ಇಬ್ಬರಿಗೂ ಕಠಿಣ ಎನ್ನಿಸತೊಡಗಿತು.

ಆಸ್ಕರ್ ವೈಲ್ಡನನ್ನು ಮನೋರಂಜನಿಯವರ ಮಾತುಗಳು ಬಹಳವಾಗಿಯೇ ಆಕರ್ಷಿಸಿದ್ದವು. ಇಂಥ ಸಂಕೀರ್ಣವಾದ ಮತ್ತು ಅಷ್ಟೇ ಪ್ರಭಾವ ಬೀರುವಂತಿದ್ದ ಮಾತುಗಳನ್ನು ಇದುವರೆಗೂ ಯಾರಿಂದಲೂ, ಯಾವಾಗಲೂ ಕೇಳಿರಲಿಲ್ಲ.

ಅವತ್ತು ರಾತ್ರಿ ಬಹಳ ಹೊತ್ತಿನವರೆಗೂ ಗುನ್ನಾಲಾಲನಿಗೆ ನಿದ್ದೆ ಹತ್ತಿರಲಿಲ್ಲ. ತಾನು ಮುಂಬಯಿಗೆ ಬಂದ ಹೊಸತರಲ್ಲಿ ಮೂರು ವರ್ಷಗಳ ಕಾಲ ಧಾರಾವಿಯಲ್ಲಿ ಬದುಕಿದ್ದ ವಿಷಯ ಹೆಂಡತಿಗಾಗಲೀ, ಮಗ ಭವರ್ ಲಾಲನಿಗಾಗಲೀ ಹಾಗೂ ಸೊಸೆಗಾಗಲೀ ಗೊತ್ತಿರಲಿಲ್ಲ. ಶ್ರೀಮಂತರಿಗಿಂತಲೂ ಬದುಕಿಗಾಗಿ ಪ್ರತಿಕ್ಷಣ ಬಡಿದಾಡುವ ಜನರ ಬಗ್ಗೆಯೇ ತನಗೆ ಹೆಚ್ಚಿನ ಕಾಳಜಿ ಎಂದು ಬೆಳಿಗ್ಗೆ ಡಾಕ್ಟರ್ ಮನೋರಂಜನಿಯವರು ಹೇಳಿದ್ದ ಮಾತುಗಳು ಗುನ್ನಾಲಾಲನ ಮನಸ್ಸನ್ನು ತೀವ್ರವಾಗಿ ಕೊರೆಯಲಾರಂಭಿಸಿದವು. ಮೂರು ವರ್ಷಗಳ ಕಾಲ ತನಗೆ ಆಶ್ರಯವಿತ್ತ ಧಾರಾವಿಯನ್ನು ತಾನು ಆರ್ಥಿಕವಾಗಿ ಸದೃಢನಾದ ನಂತರ ಏಕಾಏಕಿ ಮರೆತದ್ದಾದರೂ ಹೇಗೆ? ತನಗೆ ತನ್ನ ಪುಟ್ಟ ರೂಮಿನಲ್ಲಿ ಮೂರು ವರ್ಷಗಳ ಕಾಲ ಆಶ್ರಯ ಕೊಟ್ಟು ಚಪಾತಿ–ಆಲೂ ಸಬ್ಜಿಯನ್ನು ಬತ್ತಿ ಸ್ಟೌನಲ್ಲಿ ಮಾಡಿಡುತ್ತಿದ್ದ, ಲ್ಯಾಟ್ರಿನ್ ಮಾಡಲು ಜೊತೆಯಲ್ಲಿ ಪಬ್ಲಿಕ್ ಟಾಯ್ಲೆಟ್‌ಗೆ ಕರೆದುಕೊಂಡು ಹೋಗುತ್ತಿದ್ದ ರತನ್ ಸಿಂಗ್ ಈಗ ಎಲ್ಲಿರಬಹುದು? ಪ್ರತಿ ಭಾನುವಾರ ನಾನ್ ವೆಜ್ ಮಾಡಿದಾಗ ಒಂದೆರಡು ಸೌಟು ಸಾರನ್ನು ಕೊಡುತ್ತಿದ್ದ ಪಕ್ಕದ ಜೋಪಡಿಯ ಮೇರಿಯಮ್ಮ ಸತ್ತೇ ಹೋಗಿರಬಹುದು. ಸದಾ ಕುಡಿದು ಟ್ಯಾಕ್ಸಿ ಓಡಿಸುತ್ತಿದ್ದ ಆಕೆಯ ಮಗ ಜೋಸೆಫ್ ಈಗ ಏನಾಗಿರುವನೋ? ದುಡ್ಡು ಇಲ್ಲದಾಗ ಸಾಲವಾಗಿ, ಮತ್ತೊಮ್ಮೊಮ್ಮೆ ಪುಗಸಟ್ಟೆಯಾಗಿ ಟೀ ಕೊಡುತ್ತಿದ್ದ ಚಹದಂಗಡಿಯ ಗಟ್ಟಿಗಿತ್ತಿ ಮುದುಕಿ ರಜಿಯಾ ಬೇಗಂ ಇಷ್ಟೊತ್ತಿಗಾಗಲೇ ಸತ್ತು ಬಹಳ ವರ್ಷಗಳೇ ಆಗಿರಬೇಕು. ಟೀ ಕಾಯಿಸುವುದರಲ್ಲಿ ಸಹಾಯ ಮಾಡುತ್ತಿದ್ದ ಪ್ರಾಯಕ್ಕೆ ಬಂದ ಮಗಳೊಬ್ಬಳಿದ್ದಳು ಆಕೆಗೆ. ತಾನೂ ಎಷ್ಟೋ ಸಾರಿ ಟೀ ಕುಡಿಯುತ್ತಾ ಆಕೆಯನ್ನು ಕದ್ದು ಕದ್ದು ನೋಡಿದ್ದುಂಟು. ಟೀ ಕಾಸು ಕೊಡುವಾಗ ಬೇಕಾಗಿಯೇ ಆಕೆಯ ಅಂಗೈಗೆ ಬೆರಳುಗಳನ್ನು ತಾಕಿಸುತ್ತಿದ್ದುದುಂಟು. ಏನವಳ ಹೆಸರು? ಹೌದು ಮಮ್ತಾಜ್ ಬೇಗಂ ಎಂತಲೋ ಏನೋ. ಆದರೆ ರಜಿಯಾ ಬೇಗಂ ಮಧುಬಾಲ ಎಂದೇ ಕರೆಯುತ್ತಿದ್ದಳು ಅವಳನ್ನು. ಸಿನಿಮಾ ತಾರೆ ಮಧುಬಾಲ ಎಂದರೆ ರಜಿಯಾ ಬೇಗಂ ಪ್ರಾಣ ಬಿಡುತ್ತಿದ್ದಳು. ಮಧುಬಾಲ ಸಿನಿಮಾಗಳನ್ನು ಪದೇ ಪದೇ ನೋಡುತ್ತಿದ್ದಳಂತೆ. ರಜಿಯಾ ಬೇಗಂಳ ಮಧುಬಾಲ ಈಗ ಮುದುಕಿಯಾಗಿರಬೇಕು. ಎಲ್ಲಿರುವಳೋ ಸುಂದರಿ? ದಿನಸಿ ಪದಾರ್ಥಗಳನ್ನು ತಿಂಗಳು ತಿಂಗಳು ಸಾಲ ಕೊಡುತ್ತಿದ್ದ ದಿನಸಿ ಅಂಗಡಿಯ ಮನೋಜ್ ದೇಸಾಯಿ ಖಂಡಿತ ಈಗ ಬದುಕಿರಲಾರ. ತಾನು ಅಲ್ಲಿಂದ ಹೊರಟು ಬಂದ ಹಿಂದಿನ ತಿಂಗಳಿನ ನೂರೆಂಬತ್ತು ರೂಪಾಯಿ ಬಾಕಿಯನ್ನು ಕೊಟ್ಟೇ ಬಂದಿರಲಿಲ್ಲ. ಆತನಿಗೆ ಮಕ್ಕಳಿರಲಿಲ್ಲ. ಈಗ ಅಲ್ಲಿ ದೇಸಾಯಿ ಅಂಗಡಿ ಇದೆಯೋ ಇಲ್ಲವೋ? ಎದುರು ಮನೆಯ ರುಕ್ಮಿಣಿ ಬಾಯಿ ತನ್ನ ಗಂಡ ಮನೆಯಲ್ಲಿ ಕುಡಿದು ಮಲಗಿರುವಾಗಲೇ ಕಾರವಾನ್ ಸಿನಿಮಾಕ್ಕೆ ಬರುತ್ತೀಯ ಎಂದು ಕೇಳಿದ್ದಳು. ತಾನು ಉತ್ತರ ಕೊಡದೆ ಒಳಗೆ ಹೋಗಿದ್ದೆ. ಅದಾದ ತಿಂಗಳಿಗೆ ಅವಳು ಯಾರೋ ಗಾರೆ ಕೆಲಸದವನೊಂದಿಗೆ ಗಾಟ್ಕೋಪರ್ ಸ್ಲಂಗೆ ಓಡಿಹೋಗಿದ್ದಳು. ಕೆಲವು ದಿನಗಳ ಬಳಿಕ ಅವಳ ಗಂಡ ಯಾವುದೋ ಗೂಡ್ಸ್ ಗಾಡಿ ಗುದ್ದಿ ಮೈನ್ ರೋಡಿನಲ್ಲಿ ಸತ್ತು ಬಿದ್ದಿದ್ದ. ಮುಂಬಯಿ ಮಹಾ ನಗರಪಾಲಿಕೆಯವರು ವ್ಯಾನಿನಲ್ಲಿ ಹಾಕಿಕೊಂಡು ಹೋಗಿದ್ದರು.